ಗೋಪಾಲಕೃಷ್ಣ ಗೋಖಲೆಯವರೊಂದಿಗೆ ಚರ್ಚಿಸಿದರು. 1912ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದಾಗ ದೇಶಕ್ಕೆ ಬಂದು ಸ್ವಾತಂತ್ರ್ಯ ಹೋರಾಟ ಬೆಳೆಸಿ ಎಂದಿದ್ದ ಗೋಖಲೆ ಈಗ ಇನ್ನೊಂದು ಸಲಹೆ ಕೊಟ್ಟರು: 'ನೋಡಿ ಗಾಂಧಿ, ಹೋರಾಟ ಕಟ್ಟೋಕ್ ಮೊದ್ಲು ದೇಶ ಅರ್ಥ ಮಾಡ್ಕೊಬೇಕು. ದೇಶ ಅಂದ್ರೆ ಜನ; ಜನರ ಜೀವನಾನ ಸರಿಯಾಗಿ ಅರ್ಥ ಮಾಡ್ಕೊಂಡ್ರೆ ನಿಮ್ಮ ಹೋರಾಟದ ರೂಪ ತನಗೆ ತಾನೇ ಕಟ್ಟಿಕೊಳ್ಳುತ್ತೆ' ಎಂದರು.

ಗಾಂಧಿ ಒಪ್ಪಿದರು. ಗೋಖಲೆ, ಗುರುವಿನ ಸ್ಥಾನದಲ್ಲಿದ್ದರು. ಅವರಿಗೆ ನಮಸ್ಕರಿಸಿ ಹೊರಟರು. ಆಗಲೂ ಗೋಖಲೆ ಹೇಳಿದರು: 'ಜನ ಅಂದ್ರೆ ಸಾಮಾನ್ಯ ಜನ; ಅವರ ಜೀವನ ಅರ್ಥ ಮಾಡ್ಕೊಳ್ಳೋದೆ ಮುಖ್ಯ.'

ಗಾಂಧಿ 'ನನಗೆ ಅರ್ಥ ಆಯ್ತು. ನಿಮ್ಮ ಮಾರ್ಗದರ್ಶನದಂತೆ ನಡೆಯುವೆ' ಎಂದರು, ಹೊರಟರು. ರೈಲಿನಲ್ಲಿ ಮೂರನೇ ದರ್ಜೆಯ ಬೋಗಿಯಲ್ಲಿ ಪ್ರಯಾಣಿಸುತ್ತ ಜನರ ಬದುಕಿನ ಆಳ ಅಗಲಗಳನ್ನು ಅರ್ಥಮಾಡಿಕೊಂಡರು. ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆಯೇ ಸರಿಯಾಗಿಲ್ಲದ ಜನರ ಜೊತೆ ಇರಬೇಕಾದರೆ ತನ್ನ ಸೂಟು ಬೂಟಿನ ಬದುಕಿನಿಂದ ಬಿಡುಗಡೆಯಾಗಬೇಕೆಂದು ಬೇಗ ಅರ್ಥವಾಯಿತು. ಹಿಂದಿನ ಉಡುಪು ಕಿತ್ತೊಗೆದು ತುಂಡು ಪಂಚೆ, ಒಂದು ಮೇಲೊದಿಕೆಯಲ್ಲಿ ಅರೆಬೆತ್ತಲೆ ಮನುಷ್ಯರಾದರು. ಇದು ಗಾಂಧಿಗೆ ಕಾಡಿದ ಪಾಪಪ್ರಜ್ಞೆಯ ಫಲ.

ದೇಶಪ್ರವಾಸ ಮುಗಿಸಿ ಬಂದವರೇ ಕಸ್ತೂರ್‌ಬಾಗೆ ತನ್ನ ನಿಲುವು ತಿಳಿಸಿದ್ದರು. ಆಶ್ರಮ ಕಟ್ಟುವ ಆಕಾಂಕ್ಷೆ ವ್ಯಕ್ತಪಡಿಸಿದ್ದರು. ಕಸ್ತೂರ್‌ಬಾ ಸರಳ ಜೀವನಕ್ಕೆ ಸಜ್ಜಾಗಿದ್ದರು. ಮೊದಲಿಗೆ ಜೀವನಲಾಲ್ ಮೆಹ್ತಾ ಎಂಬ ಬ್ಯಾರಿಸ್ಟರ್ ಕೊಟ್ಟ ಬಂಗಲೆಯಲ್ಲಿ ಕೆಲಕಾಲ ಆಶ್ರಮರೂಪಿ ಜೀವನ ಸಾಗಿತು. ಆನಂತರ ಸಬರಮತಿ ನದಿದಂಡೆಯಲ್ಲಿ ಸಿಕ್ಕಿದ ಜಾಗದಲ್ಲಿ ಆಶ್ರಮ ಎದ್ದಿತು. ಆರಂಭಕ್ಕೆ ಸುಮಾ ರು ಇಪ್ಪತ್ತೈದು ಜನ ಆಶ್ರಮವಾಸಿಗಳು. ಆಶ್ರಮದ ಪೂರ್ಣ ನೇತೃತ್ವ ಕಸ್ತೂರ್‌ಬಾ ಅವರದು. ಇವರ ಮಾರ್ಗದರ್ಶನದಲ್ಲಿ ಗಾಂಧೀ ಬಂಧು ಮಗನ್‌ಲಾಲ್‌ನ ಮೇಲುಸ್ತುವಾರಿ.

* * *

ಕಸ್ತೂರ್‌ಬಾ ನೆನಪಿನಾಳದಲ್ಲಿದ್ದರು. ಗಾಂಧಿ ಮಾತಿಗೆಳೆದರು.

'ಯಾಕೆ ಸುಮ್ನೆ ಕೂತೆ ಕಸ್ತೂರ್? ಬತ್ತಳಿಕೆ ಖಾಲಿ ಆಯ್ತ?' ಎಂದು ತಮಾಷೆ ಮಾಡಿದರು.

'ಬತ್ತಳಿಕೇನ ಖಾಲಿ ಮಾಡ್ಕೊಂಡ್ರೆ ಬದುಕೂ ಖಾಲಿ ಆಗ್ ಬಿಡುತ್ತೇನೊ ಅನ್ನೊ ಭಯ ಬಾಪು. ಹಾಗಂತ ಮತ್ತೆ ಮತ್ತೆ ಬಾಣ ಬಿಡೋದ್ರಲ್ಲಿ ಅರ್ಥ ಇಲ್ಲ ಅಲ್ವ?'

ಕಸ್ತೂರ್ ತತ್ವಜ್ಞಾನಿಯಂತೆ ಮಾತಾಡುತ್ತಿದಾರೆ ಎನ್ನಿಸಿತು ಗಾಂಧಿಗೆ. ಕಸ್ತೂರ್‌ಬಾ ಮುಂದುವರೆಸಿದರು: 'ನನಗೆ ಸಬರಮತಿ ಆಶ್ರಮ ಹೊಸ ಬದುಕನ್ನೇ ಕಲಿಸ್ತು. ಹಳೇ ವ್ಯಕ್ತಿಗಳು ನಾವು. ಹೊಸದಾಗಿ ಹೊಳೆಯೋಕ್ ಶುರುವಾದ್ವಿ...'

ಕಸ್ತೂರ್ ಕಣ್ಣಲ್ಲಿ ಸಣ್ಣ ಮಿಂಚಿನ ಸಂಚಾರ.

ಆಶ್ರಮವೇ ಆಕೆಯ ನಿಜ ಸಂಸಾರ.

ಹಾಗೆಂದು ಮಕ್ಕಳನ್ನು ಮರೆಯಲಾದೀತೆ? ನೆನಪಾದರು. ಹರಿಲಾಲ್ ಮುಂಚೆಯೇ ದೇಶಕ್ಕೆ ಮರಳಿದ್ದ. ತಾನು ಪ್ರೀತಿಸಿದ ಗುಲಾಬ್‌ಚಂಚಲಳನ್ನು ಮದುವೆಯಾಗಿದ್ದ. ಆಕೆಗೆ ಅನಾರೋಗ್ಯವಾಗಿ ಒಂದಷ್ಟು ಕಾಲ ಆಶ್ರಮದಲ್ಲೇ ಇದ್ದಳು. ಅಕಾಲಿಕ ಮರಣಕ್ಕೆ ತುತ್ತಾದಳು. ಅದೊಂದು ಆಘಾತ ತನಗೆ. ಹರಿಲಾಲ್ ಅವನ ಪಾಡಿಗೆ ಅವನು ಎಲ್ಲೆಲ್ಲೊ ಇರುತ್ತಾನೆ. ಮಣಿಲಾಲ್ ಆಫ್ರಿಕಾದಲ್ಲೆ ಇದ್ದಾನೆ. ಫೀನಿಕ್ಸ್ ಪ್ರೆಸ್ಸು, ಅದ್ಯಾವುದೊ ಪತ್ರಿಕೆ ಕೆಲಸ ಮಾಡ್ಕೊಂಡಿದಾನೆ. ಸುಶೀಲ ಮಶ್ರುವಾಲ ಮಣಿಲಾಲನ ಹೆಂಡ್ತಿ, ಅರುಣ ಗಾಂಧಿ, ಇಳಾ ಗಾಂಧಿ, ಸೀತಾ ಗಾಂಧಿ ಅನ್ನೊ ಮಕ್ಕಳು, ಮಣಿಲಾಲನೂ ಸತ್ಯಾಗ್ರಹದಲ್ಲಿ ಭಾಗವಹಿಸಿ 1910ರಲ್ಲಿ ಮೂರು ಸಾರಿ ಜೈಲು ಸೇರಿದ್ದ. ತಾವು ದೇಶಕ್ಕೆ ಬರೋಕೆ ಒಂದು ವರ್ಷ ಮುಂಚೆ — ಅಂದ್ರೆ ಮದುವೆ ಆಗದೆ ಒಬ್ಬನೇ ಇದ್ದಾಗ 1914ರಲ್ಲಿ ಇಲ್ಲಿಗೆ ಬಂದ. ಮೂರು ವರ್ಷ ಇದ್ದು ವಾಪಸ್ ಹೋದ. ಇವರೇ — ಗಾಂಧಿಯೇ — ಆತನನ್ನು ದಕ್ಷಿಣ ಆಫ್ರಿಕಾಕ್ಕೆ ವಾಪಸ್‌ಕಳ್ಸಿದ್ದು, ಅಲ್ಲಿ ಅದೇನೊ ಬದಲಾವಣೆ ಮಾಡೋಕೆ ಅಂತ ಈ ದೇಶದೋರ ಪರವಾಗಿ ನಡೆಸ್ತಿದ್ದ ಪತ್ರಿಕೆ ಕೆಲಸಕ್ಕೂ ಸಂಬಳ ತಗೋಬಾರ್ದು ಅಂತ ಗಾಂಧಿ ಹೇಳಿದ್ರು. ಅದ್ರಂತೇನೇ ನಡ್ಕೊಂಡ.

ಇನ್ನು ರಾಮದಾಸ, ಮೂರನೇಮಗ; ಅಪ್ಪನ ಅನೇಕ ಆದರ್ಶಗಳು ಇಷ್ಟ ಆಗದೇ ಇದ್ರು ಹರಿಲಾಲ್ ತರಾ ಮುನಿಸಿಕೊಂಡು ಹೋಗಲಿಲ್ಲ, ಅಪ್ಪನಿಗೂ ಸಹಾಯವಾಗ್ತ, ಆಶ್ರಮದಲ್ಲೂ ಇರ್ತಾ, ಹೊರಗಡೇನೂ ಹೋಗ್ತಾ— ಹೀಗೆ ತನ್ನ ಬದುಕು ಕಟ್ಕೊಂಡಿದ್ದ. ನಿರ್ಮಲಾ ಅಂತ ಹೆಣ್ಣುಮಗಳನ್ನ ಮದುವೆ ಆದ. ಈತನಿಗೂ ಮೂರು ಜನ ಮಕ್ಕಳು: ಸುಮಿತ್ರಾಗಾಂಧಿ, ಕನೂ ಗಾಂಧಿ, ಉಷಾಗಾಂಧಿ. ತಮ್ಮ ಕೊನೇ ಮಗ ದೇವದಾಸ್, ಹುಟ್ಟಿದ್ದು ರಾಮದಾಸ್‌ನಂತೆ ದಕ್ಷಿಣ ಆಫ್ರಿಕಾದ ನಕಾಲ್ ಕಾಲೋನಿ ವಾಸದಲ್ಲಿ. ಇಲ್ಲಿಗೆ ಬಂದಮೇಲೆ ಆಶ್ರಮದಲ್ಲಿ ತನ್ನ ಜೊತೇನೆ ಇದ್ದ. ಆಮೇಲೆ ಆತನ ಇಷ್ಟದಂತೆ ರಾಜಾಜಿ ಮಗಳು ಲಕ್ಷ್ಮೀನ ಮದುವೆ ಆಗಿದ್ದ. ನಾಲ್ಕು ಜನ ಮಕ್ಕಳು: ರಾಜಮೋಹನ್‌ಗಾಂಧಿ, ಗೋಪಾಲಕೃಷ್ಣ ಗಾಂಧಿ, ರಾಮಚಂದ್ರಗಾಂಧಿ, ತಾರಾಗಾಂಧಿ.

ದೇವದಾಸ್ ಮದುವೆ ವಿಷಯದಲ್ಲಿ ಗಾಂಧಿ ಒಂದು ಷರತ್ತು ಹಾಕಿದ್ದರು. ತಾನೇ ದೇವದಾಸನ್ನ ಕರ್ಕೊಂಡು ಬಾಪು ಹತ್ತರ ಹೋಗಿ ಕೇಳಿದ್ದು ನೆನಪಿಗೆ ಬಂತು.

'ನೋಡಿ, ದೇವದಾಸ್ ಒಬ್ಬ ಹುಡುಗೀನ ಇಷ್ಟಪಟ್ಟಿದಾನೆ.'

'ಏನ್ ಮಾಡ್ಲಿ?'

'ಇಷ್ಟಪಡೋದಕ್ಕೆ ನಿಮ್ ಒಪ್ಪಿಗೆ ಕೇಳಲಿಲ್ಲ. ಮದ್ವೇಗಂತೂ ಕೇಳ್‌ಬೇಕಲ್ವ?'

ಗಾಂಧಿಗೆ ಕಸ್ತೂರ್‌ಬಾ ಬಾಣ ನಾಟಿತು. ದಿಟ್ಟಿಸಿದರು.

'ಈಗೇನು ನನ್ನ ಒಪ್ಪಿಗೆ ಬೇಕು. ಅಲ್ವ?' ಎಂದು ಕೇಳಿದರು.

'ಹೌದು.'

'ಈಗ್ಲೇ ಒಪ್ಪಿಗೆ ಕೊಡಲ್ಲ.'

ದೇವದಾಸ್ ತಾಯಿಯ ಮುಖ ನೋಡಿದ. ಕಸ್ತೂರ್‌ಬಾಗೇ ಬೇಸರವಾಗಿತ್ತು. ಕೇಳಿಯೇ ಬಿಟ್ಟರು: 'ಹರಿಲಾಲ್‌ಗೆ ಹೇಳಿದ್ರಲ್ಲ, ಹಾಗೇನೆ ಒಂದಷ್ಟುಕಾಲ ಬ್ರಹ್ಮಚರ್ಯ ಪಾಲಿಸು ಅಂತ ಉಪದೇಶ ಮಾಡ್ತೀರ?'

'ಉಪದೇಶ ಅಂತ ಯಾಕ್ ಅಂದ್ಕೊಬೇಕು. ಪ್ರೀತಿ ಪರೀಕ್ಷೆ ಅಂತ ತಿಳ್ಕೋಬಾರ್ದ?'

ಕಸ್ತೂರ್‌ಬಾ ದಿಟ್ಟಿಸಿದರು.

'ಇನ್ನೂ ವಯಸ್ಸು ಮೀರಿಲ್ಲ. ಐದು ವರ್ಷ ಕಾಯಲಿ. ಆಮೇಲೂ ಪ್ರೀತಿ ಉಳಿದಿದ್ರೆ ಆಕೇನೇ ಮದುವೆಯಾಗ್ಲಿ' ಎಂದರು ಬಾಪು.

ಆಗ ದೇವದಾಸ್ ಯೋಚಿಸಿದ. ಗಾಂಧಿ ಒಪ್ಪಿದ್ದೇ ದೊಡ್ಡದು ಅನ್ನಿಸ್ತು. 'ಆಗ್ಲಿ ಅಪ್ಪ, ಆದ್ರೆ ರಾಜಾಜಿ ಸಾಹೇಬ್ರು ಇದಕ್ ಒಪ್ಪಬೇಕಲ್ಲ?' ಎಂದ.

'ರಾಜಾಜಿಯವರ ಹತ್ರ ನಾನು ಮಾತಾಡ್ತೇನೆ. ಅದನ್ನ ನನಿಗೆ ಬಿಡು' ಎಂದರು ಗಾಂಧಿ. ಅದೇ ರೀತಿ ರಾಜಾಜಿಯವರ ಜೊತೆ ಮುಂದೊಂದು ದಿನ ಮಾತಾಡಿದರು. ಅವರನ್ನೂ ಒಪ್ಪಿಸಿಯೇ ಬಿಟ್ಟರು. ದೇವದಾಸ್ ಮತ್ತು ಲಕ್ಷ್ಮೀ — ಇಬ್ಬರೂ ಐದು ವರ್ಷಗಳವರೆಗೆ ಕಾದರು. ಪ್ರೇಮ ಪರೀಕ್ಷೆಯಲ್ಲಿ ಗೆದ್ದರು. 1933ರಲ್ಲಿ ಮದುವೆಯಾದರು.

ಎಲ್ಲ ನೆನಪುಗಳ ನಡುವೆ ಕಸ್ತೂರ್‌ಬಾ ಕಳೆದುಹೋಗಿದ್ದರು. ಗಾಂಧಿ ನೋಡುತ್ತಿದ್ದರು. ಕಸ್ತೂರ್‌ಬಾಗೆ ತನ್ನದೇಶದಲ್ಲೂ ತಾನು ಗಾಂಧಿಗೆ ಬೆಂಬಲವಾಗಿ ಹೋರಾಟ ಮಾಡಿದ ನೆನಪುಗಳು ಬಿಚ್ಚಿಕೊಳ್ಳತೊಡಗಿದ್ದವು. ಆಶ್ರಮವನ್ನು ಕಟ್ಟಿದ ಹೊಸತರಲ್ಲೇ ಚಂಪಾರಣ್‌ಗೆ ಹೋಗಿದ್ದರು. ದೇವದಾಸನ ಜೊತೆಗೆ ಹೋಗಿ ಗಾಂಧಿಗೆ ಬೆಂಬಲವಾಗಿ ನಿಂತಿದ್ದರು. ಚಂಪಾರಣ್ ಇದ್ದದ್ದು ಈಗಿನ ಬಿಹಾರದಲ್ಲಿ.

1917ರಲ್ಲಿ ನಡೆದ ಚಂಪಾರಣ ಸತ್ಯಾಗ್ರಹವೇ ಈ ದೇಶದಲ್ಲಿ ಗಾಂಧಿ ನಡೆಸಿದ ಮೊದಲ ಸತ್ಯಾಗ್ರಹ. ಕಸ್ತೂರ್‌ಬಾಗೂ ಇಲ್ಲಿನ ಮೊದಲ ಸತ್ಯಾಗ್ರಹ. ಬ್ರಿಟಿಷ್ ಸರ್ಕಾರ ಅಲ್ಲಿ ರೈತರಿಗೆ, ಗೇಣಿದಾರರಿಗೆ ತಂತಮ್ಮ ಜಮೀನಿನ ಒಂದಷ್ಟು ಭಾಗದಲ್ಲಿ ನೀಲಗಿರಿ ಬೆಳೀಲೇಬೇಕು ಅಂತ ಕಡ್ಡಾಯ ಮಾಡ್ತು. ಇಂಥ ಮರವು ಇತರೆ ಬೆಳೆಗಳಿಗೆ ಪೂರಕವಲ್ಲ. ಜೊತೆಗೆ ರೈತರ ಸ್ವಾತಂತ್ರ್ಯಕ್ಕೆ ಧಕ್ಕೆ. ಆದ್ದರಿಂದ, ರೈತರು ವಿರೋಧ ಮಾಡಿದ್ರು. ಗಾಂಧಿ ಅಲ್ಲಿಗೆ ಹೋಗಿ ಚಳವಳಿ ಕಟ್ಟಿದ್ರು. ಗಾಂಧಿ ಜೊತೆ ರಾಜೇಂದ್ರಪ್ರಸಾದ್, ಬ್ರಿಜ್ ಕಿಶೋರ್ ಪ್ರಸಾದ್, ನಾರಾಯಣ ಸಿನ್ಹ, ಮುಂತಾದವರೆಲ್ಲ ಭಾಗವಹಿಸಿದ್ದರು. ಜವಾಹರಲಾಲ ನೆಹರು ಕೂಡ ಬಂದು ಸೇರ್ಕೊಂಡ್ರು. ಚಂಪಾರಣಕ್ಕೆ ಹೋದ ಕಸ್ತೂರ್‌ಬಾ, ಗಾಂಧಿ ಆಶಯದಂತೆ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡರು. ಚಳವಳಿ ರೂಪ ಕೊಟ್ಟರು. ದೇವದಾಸ ಸಹಾಯಕನಾಗಿ ನಿಂತ. ಚಳವಳಿ ನಂತರವೂ ಗಾಂಧಿ ಅಲ್ಲಿ ಕ್ರಿಯಾಶೀಲರಾದರು. ಶಿಕ್ಷಣಕ್ಕಾಗಿ ಸಂಸ್ಥೆ ಸ್ಥಾಪಿಸಿದರು. ನೆಹರು, ಶಿಕ್ಷಣವೇ ಮುಂತಾದ ಸುಧಾರಣಾ ಕ್ರಮಗಳಿಗೆ ಬೆಂಬಲವಾಗಿ ನಿಂತರು. **(ಪಶೇಷ)**